# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **275** |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 06.12.2023 |
| **ಉತ್ತರಿಸುವ ಸಚಿವರು** | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಲಾಗಿರುವ ವಿವಿಧ ವಸತಿ ಯೋಜನೆಗಳು ಯಾವುವು; (ಜಿಲ್ಲಾವಾರು ವಿವರ ನೀಡುವುದು) | ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಳೆದ 10 ವರ್ಷಗಳಿಂದ ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ವಿವರಗಳು ಈ ಮುಂದಿನಂತಿವೆ:<br><br>1. ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಹಿನ್ನಕ್ಕಿ, ನಾಗನಾಯಕನ ಹಳ್ಳಿ (ಮರಸೂರು) ಮತ್ತು ಲಿಂಗಾಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಒಟ್ಟು 754 ಎಕರೆ ಜಮೀನಿನಲ್ಲಿ ಸೂರ್ಯನಗರ 2ನೇ ಹಂತದ ಸಂಯುಕ್ತ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿದೆ.<br>2. ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಳ ಮತ್ತು ಆದಿಗೊಂಡನಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ಒಟ್ಟು 976 ಎಕರೆ 13 ಗುಂಟೆ ಜಮೀನಿನಲ್ಲಿ ಸೂರ್ಯನಗರ 3ನೇ ಹಂತದ ಸಂಯುಕ್ತ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿದೆ.<br>3. ಬೆಂಗಳೂರು ನಗರ ಜಿಲ್ಲೆ, ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಹುಸ್ಕೂರು ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಒಟ್ಟು 28 ಎಕರೆ 24 ಗುಂಟೆ ಜಮೀನಿನಲ್ಲಿ ಸಂಯುಕ್ತ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿದೆ.<br>4. ಬೆಂಗಳೂರು ನಗರ ಜಿಲ್ಲೆ, ಬೆಳ್ಳಿಕೆರೆ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, ವಿವಿಧ ಸರ್ವೆ ನಂಬರ್‌ಗಳ ಒಟ್ಟು 79 ಎಕರೆ 37 ಗುಂಟೆ ಜಮೀನಿನಲ್ಲಿ ನಿವೇಶನ ಮತ್ತು ಸೇವೆಗಳ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>5. ಬೆಂಗಳೂರು ನಗರ ಜಿಲ್ಲೆ, ಬ್ಯಾಲಾಳು ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ವಿವಿಧ ಸರ್ವೆ ನಂಬರ್‌ಗಳ ಒಟ್ಟು 238 ಎಕರೆ 04 ಗುಂಟೆ ಜಮೀನಿನಲ್ಲಿ ನಿವೇಶನ ಮತ್ತು ಸೇವೆಗಳ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>6. ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಮಾಚೋನಾಯಕನಹಳ್ಳಿ, ಅಹೋಬಲಪಾಳ್ಯ, ನರಸಿಂಹನಪಾಳ್ಯ ಗ್ರಾಮಗಳ ವಿವಿಧ ಸರ್ವೆ ನಂಬರ್ ಗಳ ಒಟ್ಟು 195 ಎಕರೆ 14 ಗುಂಟೆ ಜಮೀನಿನಲ್ಲಿ ನಿವೇಶನ ಮತ್ತು ಸೇವೆಗಳ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿದೆ. |
| ಆ | ಸದರಿ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು ಮತ್ತು ಖರ್ಚಾದ ಅನುದಾನವೆಷ್ಟು; (ಯೋಜನಾವಾರು ವಿವರ ನೀಡುವುದು) | ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದಾಗಲಿ ಅಥವಾ ರಾಜ್ಯ ಸರ್ಕಾರದಿಂದಾಗಲಿ ಯಾವುದೇ ಅನುದಾನ ಇರುವುದಿಲ್ಲ. |

| | | |
|---|---|---|
| ಇ | ಈ ಯೋಜನೆಯಡಿ ಹಂಚಿಕೆ/ವಿಲೇವಾರಿ ಮಾಡಲಾದ ನಿವೇಶನಗಳ ಮತ್ತು ಫ್ಲಾಟ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | **ಅನುಬಂಧ -1** ರಲ್ಲಿ ಒದಗಿಸಿದೆ. |
| ಈ | ಈ ಯೋಜನೆಗಳಡಿ ಹಂಚಿಕೆ/ವಿಲೇವಾರಿ ಮಾಡಲಾಗದೆ ಉಳಿದಿರುವ ನಿವೇಶನ, ಮನೆಗಳು ಮತ್ತು ಫ್ಲಾಟ್‌ಗಳೆಷ್ಟು; ಇವುಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು? (ಯೋಜನಾವಾರು ವಿವರ ನೀಡುವುದು) | **ಅನುಬಂಧ -2** ರಲ್ಲಿ ಒದಗಿಸಿದೆ. |

**(ಸಂಖ್ಯೆ: ವಇ 182 ಕಗೃಮಂ 2023)**

**(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ
ಸಚಿವರು.